**ಎಂ.ವಿ.ಸಿ. 14/2024, ಪಿ.ಡಬ್ಲೂ-2 ಹೆಸರುಃ ಸಿ.ಹೆಚ್.ಮಂಜುನಾಥ**

**ದಿಃ11-02-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಕೆ.ಇ.ಸಿ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

2. ಸಾಕ್ಷಿ ನಿಪಿ.10 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.10(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಪಿ.ಎನ್. ವಕೀಲರಿಂದಃ**

3. ನಾನು ಅರ್ಜಿದಾರರನ್ನು ಮೊದಲ ಭಾರಿ ದಿ.07.03.2025 ರಂದು ನೋಡಿರುತ್ತೇನೆ. ಅಚಾತುರ್ಯದಿಂದಾಗಿ ದಿ.07.03.2024 ಎಂದು ತಪ್ಪಾಗಿ ನಮೂದಿಸಿರುತ್ತೇನೆ. ಅರ್ಜಿದಾರರು ನನ್ನ ಬಳಿ ದೃಷ್ಠಿಯ ಕುರಿತಾಗಿ ನ್ಯೂನ್ಯತೆಯ ಪ್ರಮಾಣ ಪತ್ರವನ್ನು ಪಡೆಯಲು ಬಂದಿದ್ದರು. ಅರ್ಜಿದಾರರು ನನ್ನ ಬಳಿ ಬರುವ ಪೂರ್ವದಲ್ಲಿ ಕಡೂರಿನ ಸಾರ್ವಜನಿಕ ಆಶ್ಪತ್ರೆ ಮತ್ತು ಶಿವಮೊಗ್ಗದ ಚಂದ್ರಗಿರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿದ್ದರು. ಅರ್ಜಿದಾರರಿಗೆ ಮೂಳೆ ಮುರಿತ ಆಗಿದ್ದು, ಆ ಕುರಿತು ಸಹ ಚಿಕಿತ್ಸೆ ಪಡೆದಿದ್ದರು. ಅರ್ಜಿದಾರರ ಕಣ್ಣಿನ ಗುಡ್ಡೆಯನ್ನು ತೆಗೆದು ಹೊಲಿಗೆ ಹಾಕಿರುತ್ತಾರೆ. ಹಾಗಾಗಿ ಅರ್ಜಿದಾರರ ಒಂದು ಕಣ್ಣು ಸಂಪೂರ್ಣವಾಗಿ ದೃಷ್ಠಿಯನ್ನು ಕಳೆದುಕೊಂಡಿದೆ. ಅರ್ಜಿದಾರರು ನನ್ನ ಬಳಿ ಚಿಕಿತ್ಸೆಯನ್ನು ಪಡೆದಿಲ್ಲ, ಬಲದಾಗಿ ದೃಷ್ಠಿ ದೋಷದ ಕುರಿತು ನ್ಯೂನ್ಯತೆಯ ಪ್ರಮಾಣ ಪತ್ರವನ್ನು ಪಡೆಯಲು ಬಂದಿದ್ದರು. ಅರ್ಜಿದಾರರು ನ್ಯೂನ್ಯತೆಯ ಪ್ರಮಾಣ ಪತ್ರವನ್ನು ಪಡೆಯಲು ಮನವಿಯ ಅರ್ಜಿಯನ್ನು ನೀಡಿದ್ದರು. ಪ್ರತ್ಯೇಕವಾಗಿ ಅರ್ಜಿಯನ್ನು ನೀಡಿಲ್ಲ. ತಾಲ್ಲೂಕು ಆಸ್ಪತ್ರೆಯಲ್ಲಿ ಆಯಾ ವಿಭಾಗದ ತಜ್ಞರು ನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡುತ್ತೇವೆ. ತಾಲ್ಲೂಕಿನ ಆಸ್ಪತ್ರೆಯಲ್ಲಿ ಮೆಡಿಕಲ್ ಬೋರ್ಡ್ ಇರುವುದಿಲ್ಲ. ಜಿಲ್ಲಾ ಕೇಂದ್ರದಲ್ಲಿ ಮಾತ್ರ ಮೆಡಿಕಲ್ ಬೋರ್ಡ್ ಇದೆ. ತಾಲ್ಲೂಕಿನ ಆಸ್ಪತ್ರೆಯಲ್ಲಿ ತಜ್ಞರು, ಆಡಳಿತ ವೈದ್ಯಾಧಿಕಾರಿ ಮತ್ತು ಫಿಸಿಷಿಯನ್ ರವರನ್ನು ಒಳಗೊಂಡ ಮೆಡಿಕಲ್ ಬೋರ್ಡ್ ಇರುತ್ತದೆ ಎಂದರೆ ಸರಿಯಲ್ಲ. ಸಾರ್ವಜನಿಕ ಆಸ್ಪತ್ರೆ, ಹೊಳಲ್ಕೆರೆಯಲ್ಲಿ ಮೆಡಿಕಲ್ ಬೋರ್ಡ್ ಇದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರ ಬಲಗಣ್ಣನ್ನು ಪರೀಕ್ಷಿಸಿ ನ್ಯೂನ್ಯತೆಯ ಪ್ರಮಾಣ ಪತ್ರವನ್ನು

ನೀಡಿರುತ್ತೇನೆ. ಅರ್ಜಿದಾರರಿಗೆ ಅಪಘಾತದಲ್ಲಿ ಕಣ್ಣಿಗೆ ಗಾಯವಾಗಿದ್ದು, ಆ ನಂತರ ಸರ್ಜರಿ ಮಾಡಿ ಕಣ್ಣುಗುಡ್ಡೆಯನ್ನು ತೆಗೆದಿದ್ದರು ಎಂದು ಹೇಳಿದ್ದು, ಅರ್ಜಿದಾರರ ಕಣ್ಣು ಗುಡ್ಡೆಯನ್ನು ತೆಗೆದಿರುವುದನ್ನು ದೃಡೀಕರಿಸಿಕೊಂಡು ನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅರ್ಜಿದಾರರ ಒಂದು ಕಣ್ಣಿನ ಸಂಪೂರ್ಣ ದೃಷ್ಠಿ ಕಳೆದುಕೊಂಡಿದ್ದು, ಹಾಗಾಗಿ ಶೇ.30 ರಷ್ಟು ನ್ಯೂನ್ಯತೆಯನ್ನು ಕೇಂದ್ರ ಸರ್ಕಾರದ ಕೈಪಿಡಿಯ ಪ್ರಕಾರ ನೀಡಿರುತ್ತೇನೆ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ